ಕರ್ನಾಟಕ ಸರ್ಕಾರ

**ಆಯುಕ್ತಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆರೋಗ್ಯ ಸೌಧ,**
**ಮಾಗಡಿ ರಸ್ತೆ, ಒಂದನೇ ಕ್ರಾಸ್, ಬೆಂಗಳೂರು-560023.**

ಸಂಖ್ಯೆ: ಸಿಆರ್‌ಜಿ/ಇ-ಪಾರ್/02/22-23 ದಿನಾಂಕ:04/05/2022

## ಸುತ್ತೋಲೆ

ವಿಷಯ:- ಗ್ರೂಪ್ 'ಬಿ' ಮತ್ತು 'ಸಿ' ಅಧಿಕಾರಿ/ಸಿಬ್ಬಂದಿಗಳ 2020-21 ಮತ್ತು 2021-22ನೇ ಸಾಲಿನ ವಾರ್ಷಿಕ ಕಾರ್ಯ ನಿರ್ವಹಣೆ ವರದಿಗಳನ್ನು e-PAR ನಲ್ಲಿ ನಿರ್ವಹಿಸುವ ಬಗ್ಗೆ.

ಉಲ್ಲೇಖ:- 1. ಆಡಳಿತ ಮತ್ತು ಸಿಬ್ಬಂದಿ ಸುಧಾರಣಾ ಇಲಾಖೆ ಸಂಖ್ಯೆ: ಡಿಪಿಎಆರ್ /26/ಎಸ್‌ಸಿಆರ್ /2020, ದಿನಾಂಕ 15.07.2020.

2. ಸರ್ಕಾರದ ಆದೇಶ ಸಂಖ್ಯೆ ಆಕುಕ/208/ಸಮನ್ವಯ/2020, ಬೆಂಗಳೂರು, ದಿನಾಂಕ 18.08.2020 ಮತ್ತು 24.08.2020.

3. ನಿರ್ದೇಶನಾಲಯದ ಪತ್ರ ಸಂಖ್ಯೆ ಸಿಆರ್‌ಜಿ/01/12/2020-21, ದಿನಾಂಕ 22.09.2020, 30.01.2021. 24.08.2021 ಮತ್ತು 11.11.2021.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ (1)(2)ರ ಆದೇಶದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಎಲ್ಲಾ ಅಧೀನ ಆರೋಗ್ಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ 'ಬಿ' ಮತ್ತು 'ಸಿ' ವೃಂದದ ಅಧಿಕಾರಿ/ಸಿಬ್ಬಂದಿಗಳ ಕಾರ್ಯನಿರ್ವಹಣಾ ವರದಿಯನ್ನು 2020-21ನೇ ಸಾಲಿನಿಂದ (E-Performance Reporting System) ನ ಮೂಲಕ ಕಡ್ಡಾಯವಾಗಿ ಆನ್‌ಲೈನ್‌ನಲ್ಲಿ ನಿರ್ವಹಿಸತಕ್ಕದ್ದು ಎಂದು ಆದೇಶಿಸಿದ್ದರಿಂದ ಉಲ್ಲೇಖ ಪತ್ರ (3)ರಲ್ಲಿ ಸಂಬಂಧಪಟ್ಟ ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರುಗಳು ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಗ್ರೂಪ್ 'ಬಿ' ಮತ್ತು 'ಸಿ' ವೃಂದದ ಅಧಿಕಾರಿ/ಸಿಬ್ಬಂದಿಗಳ 2020-21ನೇ ಸಾಲಿನ ಕಾರ್ಯ ನಿರ್ವಹಣಾ ವರದಿಗಳನ್ನು e-PAR ನಲ್ಲಿ ಕಾರ್ಯಗತಗೊಳಿಸಿ ಮಾಹಿತಿ/ವರದಿ ನೀಡಲು ಸೂಚಿಸಲಾಗಿತ್ತು. ಹಾಗೂ ದಿನಾಂಕ 11.10.2021 ರಂದು CEG Excecutive Co-ordinator ರವರಿಂದ Zoom conference ಮೂಲಕ ಪ್ರಾಥಮಿಕ ಹಂತವಾಗಿ ತರಬೇತಿ ನೀಡಲಾಗಿತ್ತು. ಆದರೆ ಇದುವರೆವಿಗೂ ನಿರ್ದೇಶನಾಲಯಕ್ಕೆ ಯಾವುದೇ ಮಾಹಿತಿ/ವರದಿ ಸ್ವೀಕೃತವಾಗಿರುವುದಿಲ್ಲ. ಸದರಿ ವಿಷಯವನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು, ಈ ಬಗ್ಗೆ ತುರ್ತಾಗಿ ವರದಿಯನ್ನು ನೀಡಲು ಸೂಚಿಸಿದೆ.

ಪ್ರಸ್ತುತ 2021-22ನೇ ಸಾಲಿನ ಗ್ರೂಪ್ 'ಎ' ಮತ್ತು 'ಬಿ' ವೃಂದದ ಅಧಿಕಾರಿ/ಸಿಬ್ಬಂದಿಗಳ ವಾರ್ಷಿಕ ಕಾರ್ಯ ನಿರ್ವಹಣಾ ವರದಿಗಳನ್ನು e-PARನಲ್ಲಿ ಪ್ರಾರಂಭಿಸಬೇಕಾಗಿರುತ್ತದೆ. ಸಂಬಂಧಪಟ್ಟ ಎಲ್ಲಾ ವಿಭಾಗೀಯ ಜಂಟಿ ನಿರ್ದೇಶಕರಗಳು ಈ ಬಗ್ಗೆ ಕ್ರಮವಹಿಸಿ, ದಿನಾಂಕ 20.05.2022ರೊಳಗೆ ಇ-ಮೇಲ್-crghfw286@gmail.com ಮೂಲಕ ಆಯುಕ್ತಾಲಯಕ್ಕೆ ವರದಿ ನೀಡಲು ಆದೇಶಿಸಿದೆ. ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ನಿಮ್ಮನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು.

M. Indumathi 4/5/22

ನಿರ್ದೇಶಕರು

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು.

ಬೆಂಗಳೂರು.

ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ:-

1. ವಿಭಾಗೀಯ ಜಂಟಿ ನಿರ್ದೇಶಕರು, ಬೆಂಗಳೂರು ನಗರ, ಬಿ.ಬಿ.ಎಂ.ಪಿ, ಮೈಸೂರು ವಿಭಾಗ, ಬೆಳಗಾವಿ ವಿಭಾಗ, ಕಲಬುರಗಿ ವಿಭಾಗ.

ಪ್ರತಿಯನ್ನು:-

1. ಆಯುಕ್ತರ ಆಪ್ತ ಶಾಖೆ, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು.
2. ಮಾನ್ಯ ನಿರ್ದೇಶಕರು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು.
3. ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕು.ಕ.ಸೇವೆಗಳು, ಬೆಂಗಳೂರು.
4. ಗಣಕಯಂತ್ರ ವಿಭಾಗ, ಇಲಾಖೆಯ ಅಂತರ್ಜಾಲದಲ್ಲಿ ಪ್ರಚುರಪಡಿಸಲು ತಿಳಿಸಿದೆ